ಒಂದ್ಹೊತ್ತು ಊಟ ಮಾಡೋದರಲ್ಲೂ ಸುಖವಿದೆ'– ಅಂತ ನನ್ನ ಎದುರೇ ಇವಳ ಉಪನ್ಯಾಸ. ಇವಳಿಗೆ ಒಂದು ಹೊತ್ತಿನ ಊಟ ಸೊನ್ನೆ ಮಾಡಿದರಲ್ಲವೆ ಅದರ ಸುಖ ಗೊತ್ತಾಗೋದು. ದೊಡ್ಡ ಬಂಗಲೇಲಿ, ತನ್ನದೇ ಆದ ರೂಮಿನಲ್ಲಿ ಟೇಬಲ್ ಲ್ಯಾಂಪ್‌ನಡಿ, ಬೆಚ್ಚಗೆ ಕೂತು ದಲಿತರ ಬಗ್ಗೆ ಕವನ, ಕಥೆ ಬರೆಯೋ ಇವಳು– ನನಗೆ ಬುದ್ಧಿ ಹೇಳೋಳು! ನಗಬೇಕಷ್ಟೆ. ತನ್ನ ಪಾಕೆಟ್‌ಮನಿ ನೂರಕ್ಕಿಂತ ಪೈಸೆ ಕಡಮೆಯಾಯಿತೆಂದರೆ ತಾರಸಿ ಹಾರುವಂತೆ ಚೀರಾಡುವ ಈ ಶೋಕಿ ಹೆಣ್ಣು ಶೋಷಣೆ ಬಗ್ಗೆ ವೇದಿಕೆಯ ಮೇಲೇರಿ ಭಾಷಣ ಬಿಗಿಯುತ್ತಾಳೆ. ಮಹಿಳೆಯರ ಹಕ್ಕುಗಳ ಬಗ್ಗೆ 'ನಾರಿ ಲೋಕದಲ್ಲಿ' ಬರೆದದ್ದೂ ಬರದದ್ದೇ. ಕಥೆಗಳಿಗಂತೂ ಲೆಕ್ಕವಿಲ್ಲ. ನಮ್ಮ ವಂಶದಲ್ಲೇ ಕಥೆ ಬರೆದವರಿಲ್ಲ. ಏನಿದ್ದರೂ ಜಾತಕ ಕುಂಡಲಿ ಬರೆಯುವುದರಲ್ಲೇ ಪ್ರತಿಷ್ಠರು. ಅಪ್ಪಟ ಬ್ರಾಹ್ಮಣ ವಂಶೋದ್ಭವಳಾದ ಇವಳಿಗೆ ಜಾತಿ ಮತಗಳ ಬಗ್ಗೆ ನಂಬಿಕೆಯೇ ಇಲ್ಲವಂತೆ. ನಾನೂ ಸುಮ್ಮನಾಗಿದ್ದೆ. ಇವಳ ಕಥೆ, ಕವನಗಳ ಬಗ್ಗೆ ಜನ ನನ್ನನ್ನು ಅಭಿನಂದಿಸುವಾಗ ನನಗೂ ಹೆಮ್ಮೆ. 'ನಿಮ್ಮ ಹುಡುಗಿ ಎಂಥ ಚೆಂದ ಕತೆ ಬರಿತಾಳ್ರೀ ಕೃಷ್ಣಸ್ವಾಮಿ' ಅಂತ ಅಧಿಕಾರಿಗಳೆಂದಾಗ ಎದೆ ಉಬ್ಬುತ್ತದೆ. ಇವಳು ಶೇಷಗಿರಿಯಪ್ಪನ ಕೊಲೆ ಬಗ್ಗೆ ಲೇಖನ ಮಾಡಿದ್ದು, ಜಾಥಾದಲ್ಲಿ ಭಾಗವಹಿಸಿ ಲಾಟಿ ಏಟು ತಿಂದದ್ದೂ ಎಲ್ಲಾ ಹೆಮ್ಮೆಯ ಸಂಗತಿಯೆ. ಅದರಿಂದ ನನಗೂ ಅಧಿಕಾರಿವರ್ಗದಲ್ಲಿ ಅದೊಂದು ಬಗೆಯ ಕಿಮ್ಮತ್ತು. ಇವಳು ಕತೆಗಾರ್ತಿಯಾದದ್ದೂ ಲಾಭವೆ. ನನ್ನನ್ನು ಎದುರು ಹಾಕಿಕೊಳ್ಳುವ ಧೈರ್ಯ ಕೆಲವರಲ್ಲಿ ಕುಸಿದಿದೆ. ಆದರೆ ಇದೆಲ್ಲದರ ಹಿನ್ನೆಲೆಯಲ್ಲಿ ಆ ಪತ್ರಿಕೆಯವನಿದ್ದಾನಂತ ರಾಧ ತಿಳಿಸಿದಾಗಲೇ ಅನುಭವವಾದದ್ದು– ಅರಗಿನ ಮನೆಯಲ್ಲಿದ್ದೇವಂತ. ಪ್ರಸಿದ್ಧ ಪತ್ರಿಕೆಗಳಲ್ಲಿ ಬರುವ ಇವಳ ಕಥೆಗಳೆಲ್ಲ ಅವನೇ ಬರೆದು ಇವಳ ಹೆಸರಿನಲ್ಲಿ ಕಳುಹಿಸುವ ಬಗ್ಗೆ ರಂಪ ಮಾಡಿ ನೆರೆಹೊರೆಯಲ್ಲಿ ಮಗಳನ್ನು ಸಣ್ಣವಳನ್ನಾಗಿ ಮಾಡುವ ಇಚ್ಛೆಯಾಗಿರಲಿಲ್ಲ. ಈ ಬಗ್ಗೆ ಪ್ರಸ್ತಾಪಿಸಿದರೆ ಅವಳಿಗೆಲ್ಲಿ ಅಪಮಾನವಾಗುವುದೋ, ನೊಂದುಕೊಳ್ಳುತ್ತಾಳೋ ಎಂದು ನನ್ನಲ್ಲೇ ನುಂಗಿಕೊಂಡಿದ್ದೆ.

ಇವರಿಬ್ಬರ ಓಡಾಟ, ಅವನ ಅಧ್ಯಕ್ಷತೆಯಲ್ಲಿ ಇವಳ ಭಾಷಣ. ಇವಳ ಅಮೃತಹಸ್ತದಿಂದ ಅವನ ಪತ್ರಿಕೆಯ ವಿಶೇಷ ಸಂಚಿಕೆ ಬಿಡುಗಡೆ. ಅವನು ತೆಗೆದ ಫೋಟೋಗಳಿಗೆ, ಇವಳ ಲೇಖನ. ಹೀಗೆ ಒಟ್ಟೊಟ್ಟಿಗೆ ಪತ್ರಿಕೆಗಳಲ್ಲಿ ಬೀದಿಗಳಲ್ಲಿ ಆದ ಇವರಿಬ್ಬರ ಹೆಸರಿನ ಪ್ರಚಾರಕ್ಕೆ ಪ್ರೇಮದ ಬಣ್ಣ ತಿರುಗಿದಾಗ ನನ್ನ ಆಫೀಸ್ ರೂಮಿಗೇ ಕರೆಸಿ ಎಚ್ಚರಿಸಿದ್ದೆ.

'ಥರ್ಡ್‌ರೇಟ್ ಪರ್ಸನ್ ಜೊತೆ ಎಂಥ ಸ್ನೇಹವೇ ಮಗು. ಕೆಲಸವಿಲ್ಲದೆ ಒಂದು ಜುಜುಬಿ ಪತ್ರಿಕೆ ನಡೆಸೊ ಸಣ್ಣ ಮನುಷ್ಯ ಅವನು. ಅವನ ಹೆಸರಿನ ಜೊತೆ ನಿನ್ನ ಹೆಸರು ಕಲೆತರೆ ಐ ಕಾಂಟ್ ಟಾಲರೇಟ್' ಅಂದಿದ್ದೆ ಗಡುಸಾಗಿ. ಸಿಗರೇಟ್ ಹೊಗೆ ದಟ್ಟವಾಗಿ ಕವಿದಿದ್ದರಿಂದ ಅವಳ ಮುಖದಲ್ಲಾದ ಬದಲಾವಣೆ ಕಂಡಿರಲಿಲ್ಲ. ಆದರೆ ಅವಳ ಅಪಹಾಸ್ಯದ ನಗೆ ನನ್ನನ್ನು ಕೆರಳಿಸಿತ್ತು. 'ಷಟ್‌ಅಪ್' ಎಂದು ಎದೆಯಲ್ಲಿ ನೋವು ಕಾಣಿಸಿಕೊಳ್ಳುವಂತೆ ಚೀರಿದ್ದೆ.

'ಹೆಸರು ಜೊತೆ ಹೆಸರು ಕಲೆತದ್ದಕ್ಕೆ ಇಷ್ಟು 'ರಾಂಗ್' ಆದ್ರೆ ಹೇಗಣ್ಣ. ಅದನ್ನೇನು ಲಗ್ನಪತ್ರಿಕೆ ಅಂದುಕೊಂಡೆಯಾ?'– ಪ್ರಶ್ನೆ ಹಾಕಿದ್ದಳು, ಶೀಲ. ಕತೆ ಬರೆಯೋಳಿಗೆ ಮಾತು ಕಲಿಸಬೇಕೆ? ಅವಳೊಡನೆ ಹೆಚ್ಚು ಮಾತು ಬೆಳಸದೆ ತಾಳ್ಮೆಯ ಪ್ರತಿರೂಪವಾಗಿ ಮೃದುವಾಗಿ ಹೇಳಿದ್ದೆ. 'ಆ ಪತ್ರಿಕೆಯವನು ಎಲ್ಲದರಲ್ಲೂ ಕ್ಲಾಸ್ ಲೆಸ್ ಫೆಲೋ. ಇವತ್ತೋ ನಾಳೆಯೋ ಸಾಯಲಿರುವ ಪತ್ರಿಕೆಯವನು ಅವನು. ನಮ್ಮ ಜಾತಿಯೇನು? ನೀತಿಯೇನು ಅನ್ನೋದನ್ನ ಯೋಚಿಸಿ ನಡೆದ್ಕೋ ಮಗು' ನನ್ನ ಈ ಚುಟುಕು ಮಾತು ಅವಳನ್ನ ಬಹಳಷ್ಟು ಕಂಗೆಡಿಸಿತ್ತು.